# ನಾನು ಗಮನಿಸಿದ ವೆಲ್ ಫೇರ್

25ನೇ ವರ್ಷದ ಶುಭಾಶಯ ಪತ್ರ



"ನಿಮ್ಮಲ್ಲಿ ಒಳಿತಿನ ಕಡೆಗೆ ಆಹ್ವಾನಿಸುವ, ಸತ್ಕಾರ್ಯಗಳನ್ನು ಆಜ್ಞಾಪಿಸುವ ಮತ್ತು ಕೆಡುಕಿನಿಂದ ತಡೆಯುವ ಒಂದು ಸಂಘಟನೆ ಇರಬೇಕು". ಪವಿತ್ರ ಕುರ್‌ಆನ್ (3:104)
ಅದೆಷ್ಟೋ ಸಂಘಟನೆಗಳು ಮೊಳಕೆಯಂತೆ ಎದ್ದು ಭಿನ್ನಾಭಿಪ್ರಾಯ, ಒಳಜಗಳ, ನಾಯಕತ್ವದ ಕೊರತೆ, ಸಂಘಟನೆಯಲ್ಲಿ ಸಂಗ್ರಹಿಸಲಾದ ಹಣದ ದುರುಪಯೋಗ, ಹೀಗೆ ಹತ್ತಾರು ಕಾರಣಗಳಿಂದ ಛಿದ್ರ ಛಿದ್ರವಾಗುತ್ತಿರುವುದನ್ನು ಕಾಣಬಹುದಾಗಿದೆ.
ಸರಿಸುಮಾರು 25 ವರ್ಷಗಳ ಹಿಂದೆ ಆರ್ಥಿಕವಾಗಿ ಹಿಂದುಳಿದ ಬಡ ಮುಸ್ಲಿಮ್ ಕುಟುಂಬಗಳಿಗೆ, ಮುಸ್ಲಿಮ್ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಸಹಾಯ ಸಹಕಾರಗಳನ್ನು ನೀಡಲು ಯಾವುದೇ ಸಂಘಟನೆಯು ಮುತುವರ್ಜಿವಹಿಸದಿರುವ ಸಂದರ್ಭದಲ್ಲಿ ಉಡುಪಿಯ ಮುಸ್ಲಿಮ್ ವೆಲ್‌ಫೇರ್ ಎಸೋಸಿಯೇಶನ್ ಎಂಬ ಸಂಘಟನೆಯು ಸ್ಥಾಪನೆಯಾಗಿ ಸಮಾಜ ಸೇವಾ ಕಾರ್ಯದಲ್ಲಿ ಸಂಪೂರ್ಣ ತನ್ನನ್ನು ತೊಡಗಿಸಿ ಅತೀ ದೊಡ್ಡ ಸಾಧನೆಯನ್ನೇ ಮಾಡಿದೆ ಎಂಬುವುದರಲ್ಲಿ ಎರಡು ಮಾತಿಲ್ಲ.
ಶ್ರೀಮಂತ ಮುಸ್ಲಿಮ್ ಬಾಂಧವರಿಂದ ಝಕಾತ್ ಹಣವನ್ನು ಸಂಗ್ರಹಿಸಿ ಅದಕ್ಕೆ ಅರ್ಹರಾದ ಬಡಬಗ್ಗರಿಗೆ ವಿತರಿಸುವ ಕಾರ್ಯ ಕಳೆದ 24 ವರ್ಷಗಳಲ್ಲಿ ನಿರಂತರವಾಗಿ ನಡೆಸಿಕೊಂಡು ಬಂದ ಈ ಸಂಘಟನೆ ಸಂಗ್ರಹಿಸಿದ ನಿಧಿಯನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಲ್ಲಿ, ಬಡಮಕ್ಕಳ ಸುನ್ನತ್ ಕಾರ್ಯಗಳಲ್ಲಿ, ಅದೇರೀತಿ ಬಡಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ ಹಾಗೂ ಹೊಲಿಗೆ ಯಂತ್ರ ವಿತರಿಸಿ ಜೀವನೋಪಾಯಕ್ಕಾಗಿ ಸ್ವಂತ ಉದ್ಯೋಗವಕಾಶವನ್ನು ಕಲ್ಪಿಸಿದುದು ಸಂಘಟನೆಯ ಅತೀ ದೊಡ್ಡ ಸಾಧನೆ ಎಂದು ಹೇಳಬಹುದು.
ವರ್ಷಂಪ್ರತಿ ತಾಲೂಕಿನಾದ್ಯಂತ ಉಚಿತ ಸುನ್ನತ್ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದ ಸಂಘಟನೆ ಸುನ್ನತ್ ವೇಳೆಯಲ್ಲಿ ಉಡುವ ವಸ್ತ್ರದ ಜೊತೆಗೆ ಔಷದೋಪಚಾರ ಹಾಗೂ ಧನ ಸಹಾಯವನ್ನು ನೀಡುತ್ತಿರುವುದು ಹಾಗೆ ವಿಧವೆಯರು, ವೃದ್ಧರು, ಅಂಧರು, ಅಂಗವಿಕಲರಿಗೆ, ಮಾಸಿಕ ಪಿಂಚಣಿಯನ್ನು ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ನೂರಾರು ಮಂದಿ ಇದರ ಪ್ರಯೋಜನ ಪಡೆಯುತ್ತಿರುವುದನ್ನು ಕಾಣಬಹುದಾಗಿದೆ. ಫಿತ್ರದಿಂದ ಸಂಗ್ರಹಿಸಿದ ಹಣವನ್ನು ಮನೆ ಮನೆಗಳಿಗೆ ನೇರವಾಗಿ ಭೇಟಿ ನೀಡಿ ವಿತರಿಸುತ್ತಿರುವುದರಿಂದ ಬಡ ಮುಸ್ಲಿಮರು ಸಂಭ್ರಮದಿಂದ ಹಬ್ಬವನ್ನು ಆಚರಿಸುವಂತಾಗಿದೆ. 25 ವರ್ಷಗಳ ಹಿಂದೆ ಫಿತ್ರ, ಝಕಾತ್ ಅರ್ಹರಿಗೆ ಸಂಘಟನಾ ರೂಪದಲ್ಲಿ ವಿತರಿಸಿದ ಉಡುಪಿ ಜಿಲ್ಲೆಯಲ್ಲೇ ಮೊತ್ತ ಮೊದಲ ಸಂಘಟನೆ ಎಂಬ ಹೆಸರಿಗೆ ಪಾತ್ರವಾಗಿದೆ ಎಂಬುವುದರಲ್ಲಿ ಸಂದೇಹವಿಲ್ಲ.
ಕುರ್ಬಾನಿ ಚರ್ಮದಿಂದ ವರ್ಷಂಪ್ರತಿ ಸಂಗ್ರಹಿಸಿದ ಹಣದಿಂದ ಬಡ ವಿಧವೆಯರಿಗೂ, ಅನಾಥ ಹಾಗೂ ಬಡ ಮುಸ್ಲಿಮ್ ಹೆಣ್ಣು ಮಕ್ಕಳಿಗೂ ಸ್ವ ಉದ್ಯೋಗ ಮಾಡುವ ಅವಕಾಶ ಕಲ್ಪಿಸಿಕೊಡಲು ಕಳೆದ 24 ವರ್ಷದಿಂದಲೂ ನಿರಂತರ ಪ್ರಯತ್ನ ಮಾಡುತ್ತಿರುವ ಈ ಸಂಘಟನೆ ಉಡುಪಿ ಜಿಲ್ಲೆಗೆ ಮಾತ್ರ ಸೀಮಿತಗೊಳ್ಳದೆ ಈ ಹಿಂದೆ ಮಂಗಳೂರು ಜಿಲ್ಲೆಯ ಪುತ್ತೂರು ಪರಿಸರದಲ್ಲೂ ಆರ್ಥಿಕವಾಗಿ ಹಿಂದುಳಿದ ಬಡಪಾಯಿ ಮುಸ್ಲಿಮ್ ಮಕ್ಕಳ ಸುನ್ನತ್ ಕಾರ್ಯಗಳನ್ನು ನೆರವೇರಿಸಿದ್ದು ಬಟ್ಟೆ ಬರೆಗಳೊಂದಿಗೆ ಧನಸಹಾಯವನ್ನು ಮಾಡಿದ್ದು ಮಾತ್ರವಲ್ಲದೆ ಅದಕ್ಕಿಂತಲೂ ಮಿಗಿಲಾಗಿ ಕರ್ನಾಟಕ ರಾಜ್ಯವನ್ನು ಬಿಟ್ಟು ದೂರದ ಅಸ್ಸಾಂನಲ್ಲೂ ಕೋಮುಗಲಭೆಯ ಸಂದರ್ಭದಲ್ಲಿ ನೊಂದ ಮುಸ್ಲಿಮರಿಗೆ ಬಟ್ಟೆಬರೆಗಳೊಂದಿಗೆ ಆರ್ಥಿಕ ಸಹಾಯವನ್ನು ಮಾಡಿ ಸಮಾಜ ಸೇವೆಯ ಕಾರ್ಯದಲ್ಲಿ ಇತರ ಸಂಘಟನೆಗಳನ್ನು ಮೀರಿ ಮುನ್ನುಗ್ಗುತ್ತಿರುವುದು ಪ್ರಶಂಸನೀಯವಾಗಿದೆ. 24 ವರ್ಷಗಳನ್ನು ದಾಟಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಮುಸ್ಲಿಮ್ ವೆಲ್‌ಫೇರ್ ಸಂಘಟನೆಗೆ ಅಲ್ಲಾಹನು ಸರ್ವರೀತಿಯ ಸಹಾಯ ಸಹಕಾರವನ್ನು ನೀಡಲಿ. 25ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂಘಟನೆಗೆ ಶುಭಾಶಯಗಳನ್ನು ಕೋರುತ್ತಾ ನನ್ನ ಈ ಆತ್ಮೀಯ ಶುಭಾಶಯ ಪತ್ರವನ್ನು ಕೊನೆಗೊಳಿಸುತ್ತೇನೆ.

ಫಿರೋಜ್ ಮನ್ನಾ
ನಾಯರ್‌ಕೆರೆ ರೋಡ್
ಅಂಬಲಪಾಡಿ ಪೋಸ್ಟ್
ಉಡುಪಿ – 576103